ದಿನಾಂಕಃ 10.12.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದಃ</u>**

ಆರೋಪಿಯ ಗಂಡ ಈಗ ಜೀವಂತ ಇಲ್ಲ. ಆರೋಪಿಯ ಗಂಡ 5-6 ತಿಂಗಳ ಹಿಂದೆ ಮೃತರಾದರು. ಆರೋಪಿಯ ಗಂಡ ಸಾಯುವ ಮುನ್ನ ಅವರು ಪಾರ್ಶ್ವವಾಯುವಿನಿಂದ ಬಳಲುತ್ತಿದ್ದರು ಎಂದರೆ ಸರಿ. ನನ್ನ ಹಾಗೂ ಆರೋಪಿಯ ಗಂಡನ ನಡುವೆ ಹಣಕಾಸಿನ ವ್ಯವಹಾರ ಇರಲಿಲ್ಲ. ದಿ.10.11.2023 ರಂದು ಆರೋಪಿ ನನ್ನ ಬಳಿ ರೂ.1,50,000/- ಹಣ ಕೇಳಿದ್ದರು. ಮನೆಯಲ್ಲಿ ಕಷ್ಟ ಇದೆ ಎಂದು ಹೇಳಿ ಹಣ ಕೇಳಿದ್ದರು. ನಾನು ಆರೋಪಿಗೆ ಹಣ ಕೊಡುವ ಸಮಯಕ್ಕೆ ಅವರ ಗಂಡ ಆರೋಗ್ಯವಾಗಿ ಇದ್ದರು. ಆರೋಪಿಗೆ ಹಣ ಕೊಡುವ ಮುನ್ನ ನಾನು ಅವರ ಗಂಡನನ್ನು ವಿಚಾರಿಸಿರಲಿಲ್ಲ. ದಿ.16.11.2023 ರಂದು ನಾನು ಆರೋಪಿಗೆ ರೂ.1,50,000/- ಹಣ ಕೊಟ್ಟಿದ್ದೇನೆ. ನಾನು ಬ್ಯಾಂಕ್ ಆಫ್ ಬರೋಡ, ಬಿಳುಗುಳ ಶಾಖೆಯ ನನ್ನ ಖಾತೆಯಲ್ಲಿ ವ್ಯವಹಾರ ಮಾಡುತ್ತೇನೆ. ನನ್ನ ಆದಾಯವನ್ನು ನಾನು ಸದರಿ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತೇನೆ ಎಂದರೆ ಸರಿ. ನಾನು ದಿನಸಿ ಅಂಗಡಿ ಇಟ್ಟುಕೊಂಡಿದ್ದೇನೆ ಹಾಗೂ ನನ್ನ ಬಳಿ ತೋಟ ಇದೆ. ದಿ.10.11.2023 ರಿಂದ ದಿ.16.11.2023 ರ ಸಮಯಕ್ಕೆ ನನ್ನ ಬ್ಯಾಂಕ್ ಖಾತೆಯಲ್ಲಿ ಸುಮಾರು ರೂ.2,50,000/- ಹಣ ಇತ್ತು.

ನಾನು ಆರೋಪಿಗೆ ಹಣ ಕೊಡಲು ನನ್ನ ಬ್ಯಾಂಕ್ ಖಾತೆಯಿಂದ ಹಣ ವಿತ್‌ಡ್ರಾ ಮಾಡಿದ್ದೆ. ದಿ.16.11.2023 ರಂದು ಮದ್ಯಾಹ್ನ ಸುಮಾರು 12.00 ಗಂಟೆಗೆ ನಾನು ಆರೋಪಿಗೆ ಹಣ ಕೊಟ್ಟಿದ್ದೆ. ಆ ದಿನ ನಾನು ಹಣ ವಿತ್‌ಡ್ರಾ ಮಾಡಿರಲಿಲ್ಲ. ನನ್ನ ಬಳಿ ಚೆಕ್ ಬುಕ್ ಇದೆ. ಆರೋಪಿಗೆ ಚೆಕ್ ಮೂಲಕ ಹಣ ಕೊಡಲು ನನಗೆ ತೊಂದರೆ ಇರಲಿಲ್ಲ. ಆರೋಪಿ ಬಡ್ಡಿ ಸಮೇತ ನನಗೆ ಹಣ ಕೊಡುತ್ತೇನೆ ಎಂದು ಹೇಳಿದ್ದರು. ಇಂತಷ್ಟೆ ಹಣವನ್ನು ಬಡ್ಡಿ ಎಂದು ಕೊಡಬೇಕೆಂಬ ಮಾತುಕತೆಯಾಗಿರಲಿಲ್ಲ, ಆದರೆ ಬ್ಯಾಂಕ್ ರೇಟ್ ನಂತೆ ಬಡ್ಡಿ ಕೊಡುತ್ತೇನೆ ಎಂದು ಆರೋಪಿಯೇ ಹೇಳಿದ್ದರು. ದಿ.16.11.2023 ರಂದೇ ಆರೋಪಿ ನನಗೆ ನಿಪಿ-1 ರ ಚೆಕ್ ಕೊಟ್ಟಿದ್ದರು. ಚೆಕ್ ನ ಮೊತ್ತದಲ್ಲಿ ಬಡ್ಡಿಯನ್ನು ಸೇರಿಸಿರಲಿಲ್ಲ. ಆರೋಪಿಗೆ ನನ್ನ ಮನೆಯಲ್ಲೇ ಹಣ ಕೊಟ್ಟಿದ್ದೇನೆ. ಆರೋಪಿಯೇ ಚೆಕ್ ನ್ನು ಆಂಗ್ಲಭಾಷೆಯಲ್ಲಿ ಬರೆಸಿಕೊಂಡು ಬಂದಿದ್ದರು. ಚೆಕ್ ಮೊತ್ತದಲ್ಲಿ ಬಡ್ಡಿ ಹಣವನ್ನು ಸೇರಿಸುವಂತೆ ನಾನು ಹೇಳಿರಲಿಲ್ಲ. ನಾನು ಹೇಳಿದಂತೆ ಆರೋಪಿಗೆ ರೂ.1,50,000/- ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾನು ಕೂಲಿ ಕೆಲಸ ಮಾಡುವವರಿಗೆ ಬಡ್ಡಿಗೆಂದು ಹಣ ಸಾಲ ಕೊಡುತ್ತೇನೆ ಎಂದರೆ ಸರಿಯಲ್ಲ. ನಾನು 2-3 ಚೆಕ್ ಪ್ರಕರಣಗಳನ್ನು ದಾಖಲು ಮಾಡಿದ್ದೇನೆ. ಆ ಎಲ್ಲಾ ಪ್ರಕರಣದಲ್ಲಿಯೂ ಸಹಾ ಬಡ್ಡಿಯನ್ನು ಸೇರಿಸಿ ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ. ನನಗೆ ಇಬ್ಬರು ಮಕ್ಕಳು ಇದ್ದು, ಅವರಿಬ್ಬರು ಖಾಸಗಿ ವ್ಯವಹಾರ ಮಾಡುತ್ತಾರೆ. ಆರೋಪಿಯ ಗಂಡ ಆರೋಗ್ಯವಾಗಿದ್ದಾಗ ನನ್ನ ಮಗನಿಂದ ರೂ.20,000/- ಹಣವನ್ನು ಸಾಲವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ಆ ಹಣವನ್ನು ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ವ್ಯವಹಾರದ ಸಂಬಂಧ ನಾನು ಮತ್ತು ನನ್ನ ಮಗ ಬಡ್ಡಿ ಹಣ

ಕೊಡುವಂತೆ ಆರೋಪಿಯನ್ನು ಕೇಳುತ್ತಿದ್ದೆವು ಎಂದರೆ ಸರಿಯಲ್ಲ. ಆ ರೀತಿ ಬಡ್ಡಿ ಹಣ ಕೊಟ್ಟರೆ ಈ ಪ್ರಕರಣವನ್ನು ಹಿಂಪಡೆಯುತ್ತೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಗಂಡ ಮೃತರಾದ ನಂತರ ನಾನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆಯದೇ ಇದ್ದರು ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2023 ರಲ್ಲಿ ಮನೆಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರವನ್ನು ಆರೋಪಿಯ ಗಂಡರವರೇ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ ಆರೋಪಿಯ ಮನೆಯ ನಡುವೆ 100 ಮೀಟರ್ ಅಂತರ ಇದೆ. ಆರೋಪಿಯ ಕುಟುಂಬದ ಎಲ್ಲಾ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನಿಪಿ-1 ನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನಮೂದಿಸಿರುವ ಮೊತ್ತಕ್ಕೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಗಂಡನಿಂದ ಪಡೆದಿದ್ದ ಖಾಲಿ ಚೆಕ್ ನ್ನು ನಾನೇ ಬರೆದು ಬ್ಯಾಂಕಿಗೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.